# ಬಿಲೀವರ್ಸ್ ಈಸ್ಟರ್ನ್ ಚರ್ಚ್

ವಿಶ್ವ ಸಭೆಯ ಪ್ರಧಾನ ಕಛೇರಿ, ಸೇಂಟ್ ಥಾಮಸ್ ಸಮುದಾಯ

ತಿರುವಲ್ಲಾ - 689 103, ಕೇರಳ, ಭಾರತ

## ಕುರುಬನ ಪತ್ರ

**ಮಾರ್ಚ್ - ಮೇ 2026**

**ನನ್ನ ಪ್ರೀತಿಯ ಕುರುಬರಿಗೆ ಮತ್ತು ಪವಿತ್ರ ಸಭೆಯ ಎಲ್ಲಾ ನಂಬಿಗಸ್ತರಿಗೆ**

ಒಬ್ಬನೇ ದೇವರಾದ ತಂದೆ, ಮಗ ಮತ್ತು ಪವಿತ್ರಾತ್ಮನ ನಾಮದಲ್ಲಿ, ಈಗಲೂ ಮತ್ತು ಎಂದೆಂದಿಗೂ. ✠ ಆಮೆನ್.

ನಮ್ಮ ಪವಿತ್ರ ಸ್ಮರಣೆಯ ಆಧ್ಯಾತ್ಮಿಕ ಪಿತಾಮಹ, ಮೆಟ್ರೋಪಾಲಿಟನ್ ಅಥಾನಾಸಿಯಸ್ ಯೋಹಾನ್ ಪ್ರಥಮ ರವರು, ನಮಗೆ ಯಾವಾಗಲೂ "ಸಭೆಯ ಬಗ್ಗೆ ಯೋಚಿಸಿರಿ" (ಥಿಂಕ್ ಚರ್ಚ್) ಎಂದು ಹೇಳುತ್ತಿದ್ದರು ಎಂದು ನನಗೆ ನೆನಪಿದೆ. ಅವರು ಹೇಳುತ್ತಿದ್ದದ್ದು ಈ ಭೂಮಿಯ ಮೇಲೆ ನಾವು ನಿರ್ಮಿಸಬಹುದಾದ ಏಕೈಕ ಶಾಶ್ವತ ವಾಸ್ತವವೆಂದರೆ ಅದು ಸಭೆ ಮಾತ್ರ.

ಪ್ರೀತಿಯ ಮಕ್ಕಳೇ, *ನೀವು* ಸಭೆ ಆಗಿದ್ದೀರಿ - ಕ್ರಿಸ್ತನ ಜೀವಂತ ದೇಹ. ನೀವು ಸೇರಿರುವ ಸ್ಥಳೀಯ ಪ್ಯಾರಿಷ್ ಸಭೆಯು ಕೇವಲ ಒಂದು ಸಂಸ್ಥೆ ಅಥವಾ ಸಂಘಟನೆಯಲ್ಲ ಎಂಬುದನ್ನು ನೆನಪಿಡಿ. ಇದು ಬಿಷಪ್ ಮತ್ತು ಯಾಜನ ಸುತ್ತಲೂ ಒಟ್ಟುಗೂಡಿದ ಯೂಕರಿಸ್ಟಿಕ್ ಸಮುದಾಯವಾಗಿದ್ದು, ಪವಿತ್ರಾತ್ಮನಲ್ಲಿ ಐಕ್ಯವಾಗಿದ್ದು, ಪವಿತ್ರ ಸತ್ಯವೇದ ವಾಕ್ಯಗಳು ಮತ್ತು ಪವಿತ್ರ ರಹಸ್ಯಗಳಿಂದ (ಸಂಸ್ಕಾರಗಳು) ಪೋಷಿಸಲ್ಪಟ್ಟಿದೆ. ಪ್ಯಾರಿಷ್‌ನಲ್ಲಿಯೇ ನಾವು ಕ್ರಿಸ್ತನನ್ನು ಎದುರಿಸುವುದನ್ನು ಮುಂದುವರಿಸುತ್ತೇವೆ, ದೇವರ ಸ್ವಭಾವದಲ್ಲಿ ಬೆಳೆಯುತ್ತೇವೆ ಮತ್ತು ನಡೆ ಮತ್ತು ನುಡಿಯಲ್ಲಿ ಸುವಾರ್ತೆಯನ್ನು ಸಕ್ರಿಯವಾಗಿ ಜೀವಿಸಲು ಪ್ರೇರೇಪಿಸಲ್ಪಡುತ್ತೇವೆ.

ಅದಕ್ಕಾಗಿಯೇ 2026 ರಲ್ಲಿ ನಮ್ಮ ಸಭೆಗಾಗಿ ನಮ್ಮ ದರ್ಶನ ಹೀಗಿದೆ: ***'ಪ್ಯಾರಿಷ್ ಅನ್ನು ನಿರ್ಮಿಸುವುದು: ನಂಬಿಕೆ, ಜೀವನ ಮತ್ತು ಸೇವೆ.'*** ಈ ದರ್ಶನದ ಮೂರು ಅಂಶಗಳನ್ನು ಮತ್ತು ಪ್ಯಾರಿಷ್ ಆಗಿ ನಮ್ಮ ಜೀವನದಲ್ಲಿ ನಾವು ಅದನ್ನು ಪ್ರಾಯೋಗಿಕವಾಗಿ ಹೇಗೆ ಅನ್ವಯಿಸಬಹುದು ಎಂಬುದನ್ನು ನಾನು ಸಂಕ್ಷಿಪ್ತವಾಗಿ ವಿವರಿಸುತ್ತೇನೆ.

### 1 ) ನಂಬಿಕೆ

ಸ್ಥಳೀಯ ಪ್ಯಾರಿಷ್ ಸಭೆಯು ಒಂದು ದೊಡ್ಡ ಮರದಂತಿದೆ ಎಂದು ಕಲ್ಪಿಸಿಕೊಳ್ಳಿ. ನಂಬಿಕೆಯು ಮರದ ಬೇರು, ಅದು ಮರವನ್ನು

ದೃಢವಾಗಿ ಹಿಡಿದು ಪೋಷಣೆ ನೀಡುತ್ತದೆ. ಅದೇ ರೀತಿ, ಪವಿತ್ರ ನಂಬಿಕೆಯು ಪವಿತ್ರ ಸಭೆಯ ಮತ್ತು ನಮ್ಮ ಕ್ರೈಸ್ತೀಯ ಜೀವನದ ಅಡಿಪಾಯವಾಗಿದೆ.

a) ಪವಿತ್ರ ನಂಬಿಕೆಯು ಯಾರೊಬ್ಬರ ವೈಯಕ್ತಿಕ ಅಭಿಪ್ರಾಯವಲ್ಲ. ಬದಲಿಗೆ, ಇದು ಅಪೊಸ್ತಲರು ನಮಗೆ ಹಸ್ತಾಂತರಿಸಿದ ನಂಬಿಕೆಯಾಗಿದೆ, ಆರಂಭಿಕ ಚರ್ಚ್ ಫಾದರ್‌ಗಳು ದೃಢೀಕರಿಸಿದ್ದಾರೆ ಮತ್ತು ಪವಿತ್ರ ಸಭೆಯ ಜೀವನದುದ್ದಕ್ಕೂ ಸಂರಕ್ಷಿಸಲ್ಪಟ್ಟಿದ್ದಾರೆ. ಈ ಸುವಾರ್ತೆ ಮತ್ತು ಈ ನಂಬಿಕೆಯು ಪವಿತ್ರ ಅಪೊಸ್ತಲರು ನೀಡಿದಂತೆಯೇ ನಿಖರವಾಗಿ ಪಾಲಿಸಲ್ಪಟ್ಟಾಗ ಮಾತ್ರ ಅಧಿಕೃತವಾಗಿರುತ್ತದೆ. ಸಂತ ಪೌಲನು ಗಲಾತ್ಯ 1:8 ರಲ್ಲಿ ಬರೆದಂತೆ, "ನಾವು ನಿಮಗೆ ಸಾರಿದ ಸುವಾರ್ತೆಗೆ ವಿರುದ್ಧವಾದದ್ದನ್ನು ನಾವೇ ಆಗಲಿ ಪರಲೋಕದಿಂದ ಬಂದ ದೇವದೂತನೇ ಆಗಲಿ ನಿಮಗೆ ಸಾರಿದರೆ ಶಾಪಗ್ರಸ್ತನಾಗಲಿ". ಇದು ಪವಿತ್ರ ನಂಬಿಕೆಯ ಗಂಭೀರತೆ ಮತ್ತು ಆಳವನ್ನು ನಮಗೆ ನೆನಪಿಸುತ್ತದೆ ಮತ್ತು ನಾವು ಬದುಕಲು ಮತ್ತು ನಿಷ್ಠೆಯಿಂದ ಸಂರಕ್ಷಿಸಲು ಕರೆಯಲ್ಪಟ್ಟಿದ್ದೇವೆ.

b) 1 ತಿಮೊಥೆಯ 3:15-16 ರಲ್ಲಿ, ಪವಿತ್ರ ಸಭೆಯನ್ನು "ಸತ್ಯದ ಸ್ತಂಭ ಮತ್ತು ಅಡಿಪಾಯ" ಎಂದು ವಿವರಿಸಲಾಗಿದೆ. ಈ ವಾಕ್ಯಭಾಗದಲ್ಲಿ, ಸಭೆಯನ್ನು ದೇವರ ಮನೆತನವಾಗಿ ಚಿತ್ರಿಸಲಾಗಿದೆ, ಸುವಾರ್ತೆಯ ಸತ್ಯವನ್ನು ಎತ್ತಿಹಿಡಿಯುವ, ಕಾವಲು ಮಾಡುವ ಮತ್ತು ಬೆಂಬಲಿಸುವ ಜವಾಬ್ದಾರಿಯನ್ನು ಅವರಿಗೆ ವಹಿಸಲಾಗಿದೆ. ಈ ಕೆಳಗಿನ ಪದ್ಯವು "ದೇವಭಕ್ತಿಯ ರಹಸ್ಯ" - ಶರೀರದಲ್ಲಿ ಬಹಿರಂಗಪಡಿಸಿದ ಯೇಸು ಕ್ರಿಸ್ತನು - ಪವಿತ್ರ ಸಭೆಯ ಘೋಷಿಸುವ ಮತ್ತು ಸಂರಕ್ಷಿಸುವ ಸತ್ಯ ಎಂದು ಎತ್ತಿ ತೋರಿಸುತ್ತದೆ. ಇದು ಕ್ರೈಸ್ತರ ನಂಬಿಕೆಯನ್ನು ಅದರ ಶುದ್ಧತೆಯಲ್ಲಿ, ಕಲಬೆರಕೆಯಿಲ್ಲದೆ ಮತ್ತು ವಿರೂಪವಿಲ್ಲದೆ ಸಂರಕ್ಷಿಸುವ ಸಭೆಯ ಜವಾಬ್ದಾರಿಯನ್ನು ಸೂಚಿಸುತ್ತದೆ.

c) ಸಂತ ಪೌಲನು 2 ತಿಮೊಥೆಯ 1:5 ರಲ್ಲಿ ಸಂತ ತಿಮೊಥೆಯನಿಗೆ "ಮೊದಲು ತನ್ನ ಅಜ್ಜಿ ಲೋವಿ ಮತ್ತು ತಾಯಿ ಯೂನೀಕೆಯಲ್ಲಿ ವಾಸವಾಗಿದ್ದ ಪ್ರಾಮಾಣಿಕ ನಂಬಿಕೆಯನ್ನು" ನೆನಪಿಸುತ್ತಾನೆ. ಅದೇ ರೀತಿಯಲ್ಲಿ, ಈ ಪವಿತ್ರ ನಂಬಿಕೆಯು ನಮ್ಮ ಮನೆಗಳಲ್ಲಿ ವಾಸಿಸುತ್ತದೆ ಮತ್ತು ಮುಂದಿನ ಪೀಳಿಗೆಗೆ ನಿಷ್ಠೆಯಿಂದ ಹಸ್ತಾಂತರಿಸಲ್ಪಡುತ್ತದೆ ಎಂದು ನಾವು ಖಚಿತಪಡಿಸಿಕೊಳ್ಳಬೇಕು.

**2 ) ಜೀವನ**

ಜೀವನವೇ ಮರ - ಕಾಂಡ, ಕೊಂಬೆಗಳು ಮತ್ತು ಎಲೆಗಳು ಎಲ್ಲರಿಗೂ ಗೋಚರಿಸುತ್ತವೆ. ಒಂದು ಪ್ಯಾರಿಷ್‌ನ ಜೀವನವು ನಾವು ಪ್ರತಿದಿನ ನಮ್ಮ ನಂಬಿಕೆಯನ್ನು ಹೇಗೆ ಬದುಕುತ್ತೇವೆ ಎಂಬುದರಲ್ಲಿ ಕಂಡುಬರುತ್ತದೆ, ಇದರಲ್ಲಿ ನಮ್ಮ ಜೀವನದ ಆಧ್ಯಾತ್ಮಿಕ ಮತ್ತು ಲೌಕಿಕ ಅಂಶಗಳು ಸೇರಿವೆ.

a) ಈ ಜೀವನದ ಮುಖ್ಯ ಕೇಂದ್ರ ಬಿಂದುವಾಗಿ ದೈವಿಕ ಆರಾಧನೆಯು ನಿಷ್ಠಾವಂತ ಆಚರಣೆಯಾಗಿದೆ. ಪ್ಯಾರಿಷ್ ಸಮುದಾಯವಾಗಿ, ನಾವು ವಾರದಿಂದ ವಾರಕ್ಕೆ ಪವಿತ್ರ ಬಲಿಪೀಠದ ಸುತ್ತಲೂ ಒಟ್ಟುಗೂಡುತ್ತೇವೆ, ಕ್ರಿಸ್ತನಿಂದ ಶಕ್ತಿ ಮತ್ತು ಪೋಷಣೆಯನ್ನು ಪಡೆಯುತ್ತೇವೆ. ನಾವು ಸಭೆಯ ಪ್ರಾರ್ಥನಾ ಕ್ಯಾಲೆಂಡರ್ ಅನ್ನು ಅನುಸರಿಸುತ್ತೇವೆ, ಭಕ್ತಿ ಮತ್ತು ಏಕತೆಯಿಂದ ಉಪವಾಸ ಮತ್ತು ಹಬ್ಬಗಳನ್ನು ಆಚರಿಸುತ್ತೇವೆ. ಈ ರೀತಿಯಾಗಿ, ಪವಿತ್ರ ಸಂಸ್ಕಾರಗಳು ಪ್ಯಾರಿಷ್ ಜೀವನದಲ್ಲಿ ಆಳವಾಗಿ ಸಂಯೋಜಿಸಲ್ಪಡುತ್ತವೆ, ಮತ್ತು ಪವಿತ್ರ ತ್ರೈಯೇಕ ದೇವರು ನಮ್ಮ ಆರಾಧನೆಯ ಕೇಂದ್ರ ಬಿಂದುವಾಗಿದ್ದಾನೆ.

b) ಈ ಜೀವನವನ್ನು ನಮ್ಮ ಮನೆಗಳ ಒಳಗೆಯೂ ನಡೆಸಬೇಕು. ನಮ್ಮ ಕುಟುಂಬಗಳು ಸಣ್ಣ ಸಭೆಗಳಾಗಬೇಕು, ಅಲ್ಲಿ ಪ್ರಾರ್ಥನೆಯು ದೈನಂದಿನ ಜೀವನದ ನೈಸರ್ಗಿಕ ಭಾಗವಾಗಿದೆ. ನಾವು ನಮ್ಮ ಮನೆಗಳಲ್ಲಿ ನಿಯಮಿತ ಪ್ರಾರ್ಥನೆಯ ಲಯಗಳನ್ನು ಸ್ಥಾಪಿಸಬೇಕು: ಬೆಳಿಗ್ಗೆ ಮತ್ತು ಸಂಜೆ ಪ್ರಾರ್ಥನೆಗಳು, ಪವಿತ್ರ ಸತ್ಯವೇದ ವಾಕ್ಯಗಳನ್ನು ಓದುವುದು ಮತ್ತು ದೇವರ ಮುಂದೆ ಧ್ಯಾನದ ಶಾಂತ ಕ್ಷಣಗಳು.

c) ನಮ್ಮ ಕ್ರೈಸ್ತೀಯ ಜೀವನವು ನಾವು ವಾಸಿಸುವ ಸಮುದಾಯಗಳಲ್ಲಿಯೂ ಗೋಚರಿಸಬೇಕು: ನಾವು ಓದುವ ಶಾಲೆಗಳಲ್ಲಿ ಮತ್ತು ಕಾಲೇಜುಗಳಲ್ಲಿ, ನಾವು ಸೇವೆ ಸಲ್ಲಿಸುವ ಸ್ಥಳಗಳಲ್ಲಿ, ನಾವು ನಿರ್ವಹಿಸುವ ಸಂಬಂಧಗಳಲ್ಲಿ ಮತ್ತು ನಾವು ನಮ್ಮನ್ನು ಹೇಗೆ ನಡೆಸಿಕೊಳ್ಳುತ್ತೇವೆ ಎಂಬುದರಲ್ಲಿ. ಈ ಎಲ್ಲಾ ವಿಷಯಗಳಲ್ಲಿ ನಮ್ಮ ಜೀವನವು ಕ್ರಿಸ್ತನನ್ನು ಪ್ರತಿಬಿಂಬಿಸಬೇಕು, ಏಕೆಂದರೆ ನಮ್ಮ ಜೀವನವು ನಮ್ಮ ಮಾತುಗಳಿಗಿಂತ ಹೆಚ್ಚು ಶಕ್ತಿಯುತವಾಗಿ ಮಾತನಾಡುತ್ತದೆ.

**3 ) ಸೇವೆ**

ಸೇವೆಯು ಮರದ ಫಲವಾಗಿದೆ; ಅದು ನಮ್ಮ ನಂಬಿಕೆ ಮತ್ತು ಆಧ್ಯಾತ್ಮಿಕ ಜೀವನದ ಗೋಚರ ಫಲಿತಾಂಶವಾಗಿದೆ. ಒಬ್ಬ ಕ್ರೈಸ್ತನು ಕ್ರಿಯೆಯ ಮೂಲಕ ನಂಬಿಕೆಯನ್ನು ಜೀವಿಸುವವನಾಗಿದ್ದಾನೆ.

a) ದೈವಿಕ ಆರಾಧನೆಯ ಕ್ರಮದ ಕೊನೆಯಲ್ಲಿ, ನಾವು ಆಶೀರ್ವದಿಸಲ್ಪಡುತ್ತೇವೆ ಮತ್ತು ನಮ್ಮ **ನಡೆ** ಮತ್ತು **ನುಡಿಯಲ್ಲಿ** ದೇವರ ಸೇವೆ ಮಾಡಲು ಕಳುಹಿಸಲ್ಪಡುತ್ತೇವೆ. ಇದು ನಮ್ಮ ವೃತ್ತಿ ಮತ್ತು ಕರೆ - ನಮ್ಮ ನೆರೆಹೊರೆಯವರು, ನಮ್ಮ ಸಮುದಾಯಗಳು ಮತ್ತು ನಮ್ಮ ಸುತ್ತಲಿನ ಸಮಾಜವನ್ನು ತಲುಪಬೇಕಾಗಿದೆ. ಆರಂಭಿಕ ಚರ್ಚ್ ಫಾದರ್‌ಗಳು ಇದನ್ನು ಸಾಮಾನ್ಯವಾಗಿ ***"ಪ್ರಾರ್ಥನಾ ವಿಧಾನದ ನಂತರದ ಪ್ರಾರ್ಥನೆ"*** ಅಥವಾ ***"ಲಿಟರ್ಜಿ ಆದ ನಂತರದ ಲಿಟರ್ಜಿ"*** ಎಂದು ಬಣ್ಣಿಸಿದ್ದಾರೆ.

b) ದೇವರ ಮಕ್ಕಳಾದ ನಾವು, ದಾನ ಮತ್ತು ಕರುಣೆಯ ಕಾರ್ಯಗಳ ಮೂಲಕ ಸುವಾರ್ತೆಯನ್ನು ಸಕ್ರಿಯವಾಗಿ ಜೀವಿಸಲು ಕರೆಯಲ್ಪಟ್ಟಿದ್ದೇವೆ, ಉದಾಹರಣೆಗೆ: ಬಡವರು ಮತ್ತು ವಿಧವೆಯರನ್ನು ನೋಡಿಕೊಳ್ಳುವುದು, ದೀನದಲಿತ ಮಕ್ಕಳಿಗೆ ಶಿಕ್ಷಣ ನೀಡುವುದು ಮತ್ತು ಬೆಂಬಲಿಸುವುದು, ಅಗತ್ಯವಿರುವವರಿಗೆ ದಯೆ ಮತ್ತು ಕರುಣೆಯನ್ನು ತೋರಿಸುವುದು, ದೇವರ ಸೃಷ್ಟಿಯ ಜವಾಬ್ದಾರಿಯುತ ಮೇಲ್ವಿಚಾರಕರಾಗುವುದು.

ಈ ಮಹಾ ಲೆಂಟ್ ನ ಕಾಲದಲ್ಲಿ ಮತ್ತು ಅದರಾಚೆಗೆ, *'ಪ್ಯಾರಿಷ್ ಅನ್ನು ನಿರ್ಮಿಸುವುದು: ನಂಬಿಕೆ, ಜೀವನ ಮತ್ತು ಸೇವೆ'* ಎಂಬ ದರ್ಶನವು ನಮಗೆ ಸ್ಪಷ್ಟವಾದ ಮುನ್ನಡೆಯ ಹಾದಿಯನ್ನು ನೀಡಲಿ. ಮತ್ತು ನಾವೆಲ್ಲರೂ - ಬಿಷಪ್ ರವರು, ಯಾಜಕರು ಮತ್ತು ವಿಶ್ವಾಸಿಗಳು ಒಟ್ಟಾಗಿ ಸಮರ್ಪಣೆ ಮತ್ತು ಪರಿಶ್ರಮದಿಂದ ಅದನ್ನು ಸ್ವೀಕರಿಸಿದಾಗ ಈ ದರ್ಶನವು ಫಲ ನೀಡುತ್ತದೆ.

ಶೀಘ್ರದಲ್ಲೇ, ನಾವು ಪವಿತ್ರ ಥಿಯೋಟೊಕೋಸ್ ಅವರ ಘೋಷಣೆಯ ಹಬ್ಬವನ್ನು ಆಚರಿಸುತ್ತೇವೆ, ನಂತರ ಪಾಮ್ ಸಂಡೆ (ಗರಿಗಳ ಭಾನುವಾರ) ಆಚರಿಸುತ್ತೇವೆ. ಅದರ ನಂತರ, ನಾವು ವರ್ಷದ ಅತ್ಯಂತ ಪವಿತ್ರ ಸಮಯವನ್ನು - ಪವಿತ್ರ ವಾರವನ್ನು - ಪ್ರವೇಶಿಸುತ್ತೇವೆ - ನಮ್ಮ ಕರ್ತನೊಂದಿಗೆ ಆತನ ಶ್ರಮಮರಣದ ಮೂಲಕ ಪ್ರಯಾಣಿಸುತ್ತೇವೆ ಮತ್ತು
ಪಾಶ್ಚಾ (ಈಸ್ಟರ್) ರಂದು ಆತನ ಅದ್ಭುತವಾದ ಪುನರುತ್ಥಾನದಲ್ಲಿ ಕೊನೆಗೊಳ್ಳುತ್ತದೆ.

ನನ್ನ ಪ್ರೀತಿಯ ಮಕ್ಕಳೇ, ಈ ಪವಿತ್ರ ಉಪವಾಸದ ದಿನಗಳಲ್ಲಿ ನಿಮ್ಮೆಲ್ಲರನ್ನೂ ನನ್ನ ಪ್ರಾರ್ಥನೆಯಲ್ಲಿ ಸಮರ್ಪಿಸಿಕೊಳ್ಳುತ್ತೇನೆ, ಈ ಲೆಂಟನ್ ಪ್ರಯಾಣದಲ್ಲಿ ನಿಮ್ಮೊಂದಿಗೆ ನಡೆಯುತ್ತಿದ್ದೇನೆ ಮತ್ತು ನಿಮ್ಮ ಆಧ್ಯಾತ್ಮಿಕ ತಂದೆಯಾಗಿ ನಾನು ಹಂಚಿಕೊಂಡಿರುವ

ಎಲ್ಲವನ್ನೂ ಸಕ್ರಿಯವಾಗಿ ಬದುಕಲು ನಿಮ್ಮನ್ನು ಪ್ರೋತ್ಸಾಹಿಸುತ್ತಿದ್ದೇನೆ. ದಯವಿಟ್ಟು ಈ ದುರ್ಬಲ ಮತ್ತು ಪಾಪಿ ಸೇವಕನನ್ನು ದೇವರ ಸಿಂಹಾಸನದ ಮುಂದೆ ನಿಮ್ಮ ನಿಯಮಿತ ಪ್ರಾರ್ಥನೆಗಳಲ್ಲಿ ಆತನ ಕರುಣೆ ಮತ್ತು ಅನುಗ್ರಹಕ್ಕಾಗಿ ನೆನಪಿಸಿಕೊಳ್ಳಿರಿ.

ಪವಿತ್ರ ತ್ರೈಯೇಕ ದೇವರಾದ; ತಂದೆ, ಮಗ ಮತ್ತು ಪವಿತ್ರಾತ್ಮನು ತಾನೇ ಆತನ ಚಿತ್ತವನ್ನು ಗ್ರಹಿಸಲು ನಿಮಗೆ ಜ್ಞಾನವನ್ನು, ಆತನ ಆಜ್ಞೆಗಳನ್ನು ಪಾಲಿಸಲು ಶಕ್ತಿಯನ್ನು ಮತ್ತು ಆತನ ಕರುಣೆಯನ್ನು ಪ್ರತಿಬಿಂಬಿಸಲು ಪ್ರೀತಿಯನ್ನು ನೀಡಲಿ. ಮತ್ತು ಎಲ್ಲಾ ಸಂತರ ಮತ್ತು ಪವಿತ್ರ ಥಿಯೋಟೊಕೋಸ್ ಅವರ ಮಧ್ಯಸ್ಥಿಕೆಗಳು ಈಗಲೂ ಮತ್ತು ಯಾವಾಗಲೂ ದೇವರ ಸಿಂಹಾಸನದ ಮುಂದೆ ನಮಗೆ ರಕ್ಷಣೆಯಾಗಲಿ. ✠ ಆಮೆನ್.

ತಂದೆಯ ಪ್ರೀತಿ ಮತ್ತು ಪ್ರಾರ್ಥನೆಗಳೊಂದಿಗೆ



**✠ ಮೊರನ್ ಮೋರ್ ಸ್ಯಾಮುವೇಲ್ ಥಿಯೋಫಿಲಸ್**

**ಮೆಟ್ರೋಪಾಲಿಟನ್**

**ದಿನಾಂಕ :** 13 ಮಾರ್ಚ್ 2026

**ಸ್ಥಳ :** ವಿಶ್ವ ಸಭೆಯ ಪ್ರಧಾನ ಕಛೇರಿ

---

**ವಿಶೇಷ ಸೂಚನೆ:** ದಯವಿಟ್ಟು ಇದನ್ನು ಎಲ್ಲಾ ಪ್ರಾದೇಶಿಕ ಭಾಷೆಗಳಿಗೆ ಅನುವಾದಿಸಲಾಗಿದೆ ಮತ್ತು ವಿಶ್ವಾಸಿಗಳ ಪ್ರೋತ್ಸಾಹಕ್ಕಾಗಿ ಎಲ್ಲ ಸಭೆಗಳಲ್ಲಿ ಓದಲಾಗಿದೆಯೇ ಎಂದು ಖಚಿತಪಡಿಸಿಕೊಳ್ಳಿರಿ.